ಮಾರ್ಗದ ಪೈಕಿ ಈಗಾಗಲೇ 3. ಕಿ.ಮಿ. ಉದ್ದ ಹೆಚ್.ಡಿ.ಪಿ.ಇ. ಕೊಳವೆಯು ತಯಾರಾಗಿದ್ದು ಮೂರನೆ ಪಕ್ಷದವರಿಂದ ಪರೀಕ್ಷೆಯ ಹಂತದಲ್ಲಿದೆ (ಥ್ರಡ್ ಪಾರ್ಟಿ ಇನ್‌ಸ್ಪೆಕ್ಷನ್) ಸಧ್ಯದಲ್ಲೆ ಕೊಳವೆ ಅಳವಡಿಸುವ ಕಾಮಗಾರಿ ಪ್ರಾರಂಭವಾಗುವುದು.

ಸದರಿ ಯೋಜನೆಯಡಿ ನಿರ್ಮಿಸಬೇಕಾದ 2 ದಶಲಕ್ಷ ಗ್ಯಾಲನ್ ಸಾಮರ್ಥ್ಯದ ಜಲ ಶುದ್ದೀಕರಣಾಗಾರ ಘಟಕದ ಕಾಮಗಾರಿ ಹಾಗು ನಾಲ್ಕು ಮೇಲ್ಮಟ್ಟದ ಜಲಸಂಗ್ರಹಾಗಾರದ ಕಾಮಗಾರಿಗೆ ಟೆಂಡರ್‌ಗಳು ಈಗಾಗಲೇ ಬಂದಿದ್ದು, ಗುತ್ತಿಗೆಯ ಅನುಮೋದನೆಯ ಹಂತದಲ್ಲಿದೆ.

2. ಶಿಗ್ಗಾಂವ್ ಮತ್ತು ಸವಣೂರು ಪಟ್ಟಣಗಳಿಗೆ ಅಳವಡಿಸಬೇಕಾದ ಕೊಳವೆ ಮಾರ್ಗ ಹಾಗೂ ನಾಲ್ಕು ಜಲಸಂಗ್ರಹಾಗಾರದ ಕಾಮಗಾರಿಗಳನ್ನು 10 : 99 ಅಂತ್ಯಕ್ಕೆ ಹಾಗೂ ಜಲಶುದ್ದೀಕರಣಾಗಾರದ ಘಟಕವನ್ನು 12 : 99ಕ್ಕೆ ಪೂರ್ಣಗೊಳಿಸಿ ಯೋಜನೆಯನ್ನು ಚಾಲ್ತಿಗೊಳಿಸಲು ಯೋಜಿಸಲಾಗಿದೆ.

ಸವಣೂರು ಪಟ್ಟಣದಲ್ಲಿ ಇಂಡಸ್ಟ್ರೀಯಲ್ ಎಸ್ಟೇಟ್.

844(1284) ಶ್ರೀ ಕುನ್ನೂರ್ ಮಂಜುನಾಥ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸವಣೂರು ಪಟ್ಟಣದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ತೆಗೆದುಕೊಳ್ಳಲಾದ ಜಮೀನಿನ ವಿಸ್ತೀರ್ಣವೆಷ್ಟು; ಯಾವಾಗ ತೆಗೆದುಕೊಳ್ಳಲಾಗಿದೆ;

ಆ) ಸದರಿ ಪಟ್ಟಣದಲ್ಲಿ ಈ ವರೆಗೂ ಸಣ್ಣ ಕೈಗಾರಿಕಾ ವಸಾಹತು ಪ್ರಾರಂಭಿಸದಿರಲು ಕಾರಣಗಳೇನು?

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಸಣ್ಣ ಕೈಗಾರಿಕೆ ಸಚಿವರು) :—

ಅ) ಸವಣೂರು ಪಟ್ಟಣದಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸಲು 15 ಎಕರೆ ಭೂಮಿಯನ್ನು ಕೈಗಾರಿಕಾ ಅಭಿವೃದ್ಧಿ ಪ್ರದೇಶ ಮಂಡಳಿಯಿಂದ ದಿ : 11.9.97ರಂದು ಕೆ.ಎಸ್.ಎಸ್. ಐ.ಡಿ.ಸಿ. ಪಡೆದಿದೆ.

ಆ) ಕೈಗಾರಿಕೆಗಳ ಸ್ಥಾಪನೆಗಾಗಿ ಉದ್ದಿಮೆದಾರರಿಗೆ ನೀಡಿದ ಆಹ್ವಾನ ಪ್ರಕಟಣೆಗಳಿಗೆ ಸೂಕ್ತ ಪ್ರತಿಕ್ರಿಯೆ ಬಂದಿರಲಿಲ್ಲ. ಕೆಎಸ್‌ಎಸ್‌ಐಡಿಸಿಯ ಅಧಿಕಾರಿಗಳು ಎರಡು ಮೂರು ಸಲ ಸವಣೂರು ಪಟ್ಟಣಕ್ಕೆ ಭೇಟಿ ನೀಡಿ ಸ್ಥಳೀಯ ಉದ್ಯಮಶೀಲರನ್ನು ಹಾಗೂ ಕೈಗಾರಿಕಾ ಇಲಾಖಾ ಅಧಿಕಾರಿಗಳನ್ನು ಸಂಪರ್ಕಿಸಿ ಸತತ ಪ್ರಯತ್ನ ಮಾಡಿ ಇತ್ತೀಚೆಗೆ ಈ ಅರ್ಜಿಗಳನ್ನು ನಿವೇಶನಗಳಿಗಾಗಿ ಪಡೆಯಲಾಗಿದೆ. ಈಗ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.